## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 601(698) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಇತ್ತೀಚಿನ ದಿನಗಳಲ್ಲಿ ರಾಜ್ಯದ ಪ್ರೌಢ ಶಾಲೆಗಳಲ್ಲಿ ಎಲ್ಲಾ ದಾಖಲೆಗಳನ್ನು ಸರ್ಕಾರದ ಆದೇಶದಂತೆ ಆನ್ ಲೈನ್ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ ಮತ್ತು ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಶಾಲೆಯಲ್ಲಿಯೇ ಡೌನ್‌ಲೋಡ್ ಮಾಡಿ ಝುರಾಕ್ಸ್ ಮಾಡಿ ವಿತರಿಸಲು ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ. ಈ ಕಾರ್ಯಚಟುವಟಿಕೆಗಳಿಗಾಗಿ ಪ್ರೌಢ ಶಾಲೆಗಳಿಗೆ ಅಂತರ್ಜಾಲ ಸಂಪರ್ಕ, ಝುರಾಕ್ಸ್ ಮಷೀನ್ ಹಾಗೂ ಇತರೆ ಅಗತ್ಯ ಪರಿಕರಗಳನ್ನು ಸರ್ಕಾರದಿಂದ ಪೂರೈಕೆ ಮಾಡಲಾಗಿದೆಯೇ; | ಪಾಠಧಾರಿತ ಮೌಲ್ಯಾಂಕನಕ್ಕೆ ಮತ್ತು SSLC ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲು ಸರ್ಕಾರಿ ಪ್ರೌಢ ಶಾಲೆಗಳಿಗೆ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ಇವರ ಸುತ್ತೋಲೆ ದಿನಾಂಕ:07.01.2026 ಹಾಗೂ ದಿನಾಂಕ:22.01.2026 ರನ್ವಯ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನದ ಲಭ್ಯತೆಯಲ್ಲಿಯೇ ಸರ್ಕಾರಿ ಪ್ರೌಢ ಶಾಲೆಗಳು ಪೂರ್ವಸಿದ್ಧತಾ ಪರೀಕ್ಷೆಗಳ ಸಂಪೂರ್ಣ ಕಾರ್ಯಗಳನ್ನು ನಿರ್ವಹಿಸುತ್ತವೆ.<br><br>ಅನುದಾನದ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| (ಆ) | ಮಾಡಿದ್ದರೆ ಪ್ರತಿ ಶಾಲೆಗೆ ಪೂರೈಕೆ ಮಾಡುವ ಪರಿಕರಗಳ ಪಟ್ಟಿ ಹಾಗೂ ನಿರ್ವಹಣೆಗೆ ನೀಡುವ ಅನುದಾನದ ಮಾಹಿತಿ ನೀಡುವುದು; | ರಾಜ್ಯದ ಸರ್ಕಾರಿ ಶಾಲೆಗಳಲ್ಲಿ SA-2 ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ Online ಮೂಲಕ Confidential Modeನಲ್ಲಿ ಕಳುಹಿಸಿ ಪರೀಕ್ಷೆಯ ಗೌಪ್ಯತೆಯನ್ನು ಕಾಪಾಡಿಕೊಂಡು SA-2 ಪರೀಕ್ಷೆಯನ್ನು ನಡೆಸುವ ಸಂಬಂಧ ಪ್ರಶ್ನೆಪತ್ರಿಕೆ ಮತ್ತು ಪರೀಕ್ಷೆ ಬರೆಯಲು ಬಿಳಿ ಹಾಳೆಗಳನ್ನು ನೀಡುವ ಸಲುವಾಗಿ SATS ನಲ್ಲಿನ ಮಾಹಿತಿಯಂತೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ 6ನೇ ತರಗತಿ ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ ರೂ. 20 ರಂತೆ, 8ನೇ ತರಗತಿ ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ ರೂ. 30 ರಂತೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಪ್ರಶ್ನೆಪತ್ರಿಕೆಗಳನ್ನು ಶಾಲಾ ಹಂತದಲ್ಲಿ ಮುದ್ರಣ ಮಾಡಲು SSK ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡುವ ಅನುದಾನವನ್ನು ನಿಯಮಾನುಸಾರ ಬಳಸಿಕೊಳ್ಳಲು ದಿನಾಂಕ:05.03.2026 ರ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ.<br><br>ಸುತ್ತೋಲೆಯನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |
| (ಇ) | ಅಗತ್ಯ ಪರಿಕರಗಳನ್ನು ಸರ್ಕಾರದಿಂದ ಪೂರೈಕೆ ಮಾಡದೇ ಇದ್ದಲ್ಲಿ ಕಾರಣವೇನು; | |
| (ಈ) | ವಿಶೇಷವಾಗಿ ಗ್ರಾಮೀಣ ಭಾಗದ ಶಾಲೆಗಳಲ್ಲಿ ಇಂತಹ ಸಮಸ್ಯೆಗಳು ಹೆಚ್ಚುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| (ಉ) | ಅಗತ್ಯ ಪರಿಕರಗಳನ್ನು ಒದಗಿಸದೇ ಕಟ್ಟುನಿಟ್ಟಾಗಿ ನಿಗದಿತ ಸಮಯದಲ್ಲಿ ಕಾರ್ಯಚಟುವಟಿಕೆ | ಪಾಠಧಾರಿತ ಮೌಲ್ಯಾಂಕನಕ್ಕೆ ಮತ್ತು SSLC ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲು ಸರ್ಕಾರಿ ಶಾಲೆಗಳಿಗೆ ಸರ್ಕಾರದಿಂದ ಅಗತ್ಯ ಅನುದಾನ ಬಿಡುಗಡೆ ಮಾಡಿದ್ದು, |

| | | |
|---|---|---|
| | ಪೂರ್ಣಗೊಳಿಸುವಂತೆ ಶಿಕ್ಷಕ/ಶಾಲಾ ಆಡಳಿತ ಮಂಡಳಿಯ ಮೇಲೆ ಒತ್ತಡ ಹೇರಿದರೆ ಕಾಲಮಿತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುವುದೇ: ಈ ಬಗ್ಗೆ ಮಾಹಿತಿ ನೀಡುವುದು? | ಲಭ್ಯವಿರುವ ಅನುದಾನದಲ್ಲಿ ಸದರಿ ಶೈಕ್ಷಣಿಕ ಚಟುವಟಿಕೆಗಳನ್ನು ನಿಗದಿತ ಸಮಯದೊಳಗೆ ಕಾರ್ಯನಿರ್ವಹಿಸಬೇಕಾಗಿರುವುದು ಶಾಲಾ ಆಡಳಿತ ಮಂಡಳಿಗಳ ಜವಾಬ್ದಾರಿಯಾಗಿದ್ದು, ಸರ್ಕಾರವು ಈ ಕುರಿತು ಯಾವುದೇ ಒತ್ತಡವನ್ನು ಶಿಕ್ಷಕರು / ಶಾಲಾ ಆಡಳಿತ ಮಂಡಳಿಯ ಮೇಲೆ ಹೇರಿರುವುದಿಲ್ಲ. |

**ಸಂಖ್ಯೆ**:ಇಪಿ 66 ಎಸ್‌ಎಲ್‌ಬಿ 2026

(**ಎಸ್. ಮಧು ಬಂಗಾರಪ್ಪ**)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಅನುಬಂಧ - 1

ಸಮಗ್ರ ಶಿಕ್ಷಣ -ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ,ನೃಪತುಂಗ ರಸ್ತೆ,ಬೆಂಗಳೂರು-560001

ಸಂಖ್ಯೆ: E-82372/ SSK/ASST/SBA/6/2025-JDQ ದಿನಾಂಕ:07/01/2026

**ಸುತ್ತೋಲೆ**

ವಿಷಯ: 2025-26ನೇ ಸಾಲಿನಲ್ಲಿ ಪಾಠಧಾರಿತ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ: 1. DSERT ರವರ ಸುತ್ತೋಲೆ ಸಂಖ್ಯೆ: E-59908 DSERT/EVG/ಪಾ.ಆ.ಮೌ (LBA)/2025-26, ದಿನಾಂಕ:16/07/2025

2. DSERT ರವರ ತಿದ್ದುಪಡಿ ಸುತ್ತೋಲೆ ಸಂಖ್ಯೆ: E-59908 DSERT/EVG/ಪಾ.ಆ.ಮೌ (LBA)/2025-26, ದಿನಾಂಕ:08/08/2025

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2025-26 ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕದಲ್ಲಿ ಪಾಠ ಆಧಾರಿತ ಮೌಲಾಂಕನ (Lesson Based Assessment)ವನ್ನು ಅಳವಡಿಸುವ ಸಂಬಂಧ ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧಿಸಲು ಹಾಗೂ ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಲು ಪಾಠ ಆಧಾರಿತ ಮೌಲಾಂಕನ ಪ್ರಶ್ನೆ ಕೋಠಿಯನು ಸಿದ್ಧಪಡಿಸಿ ಡಿ.ಎಸ್.ಸಿ.ಆರ್.ಟಿ Website ನಲ್ಲಿ ಅಳವಡಿಸಿರುತ್ತಾರೆ. DSERTಯ ಸುತ್ತೋಲೆಗಳಂತೆ ಶಾಲೆಗಳಲ್ಲಿ ಮೌಲ್ಯಾಂಕನ ಕಾರ್ಯವು ಈ ಕೆಳಕಂಡಂತೆ ನಡೆಯುತ್ತಿದೆ.

1. 1 ರಿಂದ 5ನೇ ತರಗತಿಯ ಪಾಠ ಆಧಾರಿತ ಮೌಲಾಂಕನಕ್ಕೆ 10 ಅಂಕಗಳಿಗೆ ಲಿಖಿತ ಹಾಗೂ 05 ಅಂಕಗಳಿಗೆ ಮೌಖಿಕ ಒಟ್ಟು 15 ಅಂಕಗಳಿಗೆ ಎಲ್ಲಾ ರೀತಿಯ ವಸ್ತುನಿಷ್ಠ ಪ್ರಶ್ನೆಗಳು ಮತ್ತು ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಂತೆ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ ಪಾಠ ಆಧಾರಿತ ಮೌಲಾಂಕನ (Unit Test) ಮಾಡುವುದು. ಶಿಕ್ಷಕರು ಮೌಲ್ಯಮಾಪನ ಮಾಡಿ, ಫಲಿತಾಂಶವನ್ನು SATS ತಂತ್ರಾಂಶದಲ್ಲಿ ದಾಖಲಿಸುವುದು.
2. 6 & 7ನೇ ತರಗತಿಯ ಪಾಠ ಅಧಾರಿತ ಮೌಲಾಂಕನಕ್ಕೆ 20 ಅಂಕಗಳಿಗೆ LBA ಪ್ರಶ್ನೆಕೋಠಿಯ ವಸ್ತು ನಿಷ್ಠ ಹಾಗೂ ವಿವರಣಾತ್ಮಕ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ ಲಿಖಿತ ಪಾಠಾಧಾರಿತ ಮೌಲಾಂಕನ (Unit Test) ಮಾಡುವುದು, ಶಿಕ್ಷಕರು ಮೌಲ್ಯಮಾಪನ ಮಾಡಿ, ಫಲಿತಾಂಶವನ್ನು SATS ತಂತ್ರಾಂಶದಲ್ಲಿ ದಾಖಲಿಸುವುದು.
3. 8 ರಿಂದ 10ನೇ ತರಗತಿಯ ಪಾಠ ಆಧಾರಿತ ಮೌಲಾಂಕನಕ್ಕೆ 20 ಅಂಕಗಳಿಗೆ LBA ಪ್ರಶ್ನೆಕೋಠಿಯ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ವಿವರಣಾತ್ಮಕ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ ಲಿಖಿತ ಪಾಠ ಆಧಾರಿತ ಮೌಲಾಂಕನ (Unit Test) ಮಾಡುವುದು, ಶಿಕ್ಷಕರು ಮೌಲ್ಯಮಾಪನ ಮಾಡಿ, ಫಲಿತಾಂಶವನ್ನು SATS ತಂತ್ರಾಂಶದಲ್ಲಿ ದಾಖಲಿಸುವುದು.
4. ಭಾಷಾ ವಿಷಯದಲ್ಲಿ ಪ್ರತಿ ಪಾಠ ಆಧಾರಿತ ಮೌಲಾಂಕನಕ್ಕೆ ಒಂದು ಪಾಠ ಮತ್ತು ಒಂದು ಪದ್ಯವನ್ನು ಪರಿಗಣಿಸುವುದು.
5. 6 ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಒಂದು ಪಾಠಾಧಾರಿತ ಮೌಲಾಂಕನ ಮಾಡುವುದು.

ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿರುವ ಪಾಠ ಆಧಾರಿತ ಮೌಲಾಂಕನ ಪ್ರಶ್ನೆ ಕೋಠಿಯನ್ನು (LBA) ಬಳಸಿ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ ಪಾಠ ಆಧಾರಿತ ಮೌಲಾಂಕನ (Unit Test) ಮಾಡುವುದು ಮತ್ತು ಶಿಕ್ಷಕರು ಮೌಲ್ಯಮಾಪನ ಮಾಡುವುದು. ನಂತರ ವಿದ್ಯಾರ್ಥಿಗಳ ಪ್ರಗತಿಯನ್ನು SATS ತಂತ್ರಾಂಶದಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ. LBA ಅಂಕಗಳ ವಿಶ್ಲೇಷಣೆಗೆ ಅನುಗುಣವಾಗಿ ವಿವಿಧ ರೀತಿಯ ಕಾರ್ಯತಂತ್ರಗಳನ್ನು ಅಳವಡಿಸಿಕೊಂಡು ನಿರೀಕ್ಷಿತ ಕಲಿಕೆಯನ್ನು ಸಾಧಿಸಲು ಸಹಕಾರಿಯಾಗಿದೆ.

SATS ನಲ್ಲಿ ಡಾಟಾ ಎಂಟ್ರಿ ಮತ್ತು LBA ಪ್ರಶ್ನೆ ಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ಜೆರಾಕ್ಸ್ (Xerox) ಮಾಡಲು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

(Rs in Lakh)

| Sl. No. | Activity | Physical | Unit Cost | Financial |
|---|---|---|---|---|
| | **Lesson Based Assessment Grant (I to Class VIII)** | | | |
| 1 | Lesson Based Assessment Grant (Enrol 1- 30) | 17676 | 0.0050 | 88.380 |
| 2 | Lesson Based Assessment Grant (Enrol 31 - 100 ) | 14098 | 0.0075 | 105.735 |
| 3 | Lesson Based Assessment Grant - (Enrol > 101 and <= 250) | 7482 | 0.012 | 89.784 |
| 4 | Lesson Based Assessment Grant - (Enrol > 251 and <= 1000) | 2243 | 0.020 | 44.860 |
| 5 | Lesson Based Assessment Grant - (Enrol > 1001) | 07 | 0.05 | 0.350 |
| | Total | 41506 | | 329.109 |

| | | | | |
|---|---|---|---|---|
| | **Lesson Based Assessment Grant (up to Highest Class VIII to X)** | | | |
| 1 | Lesson Based Assessment Grant - (Enrol 1- 30) | 83 | 0.02 | 1.660 |
| 2 | Lesson Based Assessment Grant - (Enrol 31 - 100 ) | 1231 | 0.035 | 43.085 |
| 3 | Lesson Based Assessment Grant - (Enrol > 101 and <= 250 ) | 2205 | 0.04 | 88.200 |
| 4 | Lesson Based Assessment Grant t - (Enrol > 251 and <= 1000 ) | 1740 | 0.05 | 87.000 |
| 5 | Lesson Based Assessment Grant - (Enrol > 1001) | 101 | 0.08 | 8.080 |
| | **Total** | **5360** | | **228.025** |

**ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಜವಾಬ್ದಾರಿಗಳು:**

1. ಉಪ ನಿರ್ದೇಶಕರು ಅಭಿವೃದ್ಧಿ ರವರು ಡಯಟ್ ನ ಹಿರಿಯ ಉಪನ್ಯಾಸಕರು, ಕಿರಿಯ ಉಪನ್ಯಾಸಕರು, ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, BRC, ECO/ BRP/ CRPರವರ ಸಭೆಯನ್ನು ನಡೆಸಿ ಪಾಠಾಧಾರಿತ ಮೌಲ್ಯಂಕನ, ಪಾಠಧಾರಿತ ಮೌಲ್ಯಮಾಪನದ ಬಗ್ಗೆ ಮಾಹಿತಿಯನ್ನು ನೀಡುವುದು. ಹಾಗೂ ಡಯಟ್‌ನ ಹಿರಿಯ ಉಪನ್ಯಾಸಕರನ್ನು ನೋಡೆಲ್ ಅಧಿಕಾರಿಯಾಗಿ ನೇಮಿಸಿ ಮೌಲ್ಯಂಕನ ಕಾರ್ಯದ ಅನುಷ್ಠಾನ ಮತ್ತು ಮೇಲುಸ್ತುವಾರಿ ಮಾಡಲು ಕ್ರಮವಹಿಸುವುದು.
2. ಎಲ್ಲಾ ಶಾಲೆಗಳಿಗೆ ಅನುದಾನವನ್ನು ಕಡ್ಡಾಯವಾಗಿ ಬಿಡುಗಡೆ ಮಾಡುವುದು ಮತ್ತು ಅನುದಾನದ ಬಳಕೆಯ ಬಗ್ಗೆ ಮಾರ್ಗದರ್ಶನ ನೀಡುವುದು ಹಾಗೂ ಪ್ರಬಂಧ ಪೋರ್ಟಲ್ ನಲ್ಲಿ ವೆಚ್ಚದ ವಿವರವನ್ನು ದಾಖಲಿಸಲು ಕ್ರಮವಹಿಸುವುದು
3. ಜಿಲ್ಲಾ ಹಂತದ ಅಧಿಕಾರಿಗಳಿಗೆ ಶಾಲೆಗಳನ್ನು ದತ್ತು ನೀಡಿ LBA ಪ್ರಗತಿ ವರದಿಯನ್ನು SATS ನಲ್ಲಿ ದಾಖಲಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು. ನಿರಂತರ ಪ್ರಕ್ರಿಯೆ ಹಾಗೂ ಮೌಲ್ಯಾಂಕನ ಚಟುವಟಿಕೆ ನಡೆದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
4. ವಿದ್ಯಾರ್ಥಿವಾರು, ವಿಷಯವಾರು , ಪಾಠವಾರು ಮೌಲ್ಯ ಮಾಪನ ಮಾಡಿರುವ ವಿಶ್ಲೇಷಣೆ ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಗಮನಿಸಿ ಸೂಕ್ತ ಮಾರ್ಗದರ್ಶನ ನೀಡುವುದು.
5. ಪಾಠಾಧಾರಿತ ಮೌಲ್ಯಾಂಕನ ರೂಪಣಾತ್ಮಕ, ಸಂಕಲನಾತ್ಮಕ ಮತ್ತು ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ LBA ಪ್ರಶ್ನಕೋಠಿಯಲ್ಲಿರುವ ಪ್ರಶ್ನೆಗಳನ್ನು ಅಳವಡಿಸಿರುವ ಬಗ್ಗೆ ಗಮನಿಸಿ ಪರೀಕ್ಷೆಗಳ ಫಲಿತಾಂಶದ ವಿಶ್ಲೇಷಣೆ ಆಧರಿಸಿ ಫಲಿತಾಂಶ ಸುಧಾರಣೆಗೆ ಕ್ರಮವಹಿಸುವುದು.
6. ಜಿಲ್ಲಾ ಹಾಗೂ ತಾಲ್ಲೂಕು ಹಂತದ ಅನುಷ್ಠಾನಾಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ SATS

ನಲ್ಲಿ ಅಂಕಗಳನ್ನು ದಾಖಲಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.

7. SATS ತಂತ್ರಾಂಶದಲ್ಲಿ ಲಭ್ಯವಿರುವ ವಿಶ್ಲೇಷಣಾ ವರದಿಯನ್ನು ಆಧರಿಸಿ ಎಲ್ಲಾ ಮೇಲ್ವಿಚಾರಣಾಧಿಕಾರಿಗಳು ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಅಗತ್ಯ ಮಾರ್ಗದರ್ಶನ ನೀಡುವುದು.
8. ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಗೆ ಇಲಾಖೆಯಿಂದ ಹೊರಡಿಸುವ ಜ್ಞಾಪನ ಸುತ್ತೋಲೆಗಳನ್ನು ಅನುಸರಿಸುವುದು. ಮೇಲಿನ ಎಲ್ಲ ಅಂಶಗಳನ್ನು ಗಮನಿಸಿ ಮೌಲ್ಯಾಂಕನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಕಡ್ಡಾಯವಾಗಿ SATS ತಂತ್ರಾಂಶದಲ್ಲಿ ಪ್ರಗತಿಯನ್ನು ದಾಖಲಿಸುವುದು.
9. ಪಾಠಾಧಾರಿತ ಮೌಲ್ಯಾಂಕನ ಚಟುವಟಿಕೆಗಳು ಪೂರ್ಣಗೊಂಡ ಎರಡು ದಿನಗಳಲ್ಲಿ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳು ಪೂರ್ಣಗೊಂಡ 7 ದಿನಗಳ ಒಳಗಾಗಿ ವಿದ್ಯಾರ್ಥಿಗಳ ಪ್ರಗತಿಯನ್ನು SATS ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರ ಜವಾಬ್ದಾರಿಗಳು:**

1. ತಾಲ್ಲೂಕು ಹಂತದಲ್ಲಿ ಮೌಲ್ಯಾಂಕನದ ಬಗ್ಗೆ ಸಭೆ ನಡೆಸಿ ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
2. ಎಲ್ಲಾ ಶಾಲೆಗಳಿಗೆ ಅನುದಾನವು ಬಿಡುಗಡೆಯಾಗಿರುವ ಬಗ್ಗೆ CRP ಗಳಿಂದ ವರದಿಯನ್ನು ಪಡೆಯುವುದು. ಹಾಗೂ ಅನುದಾನದ ಬಳಕೆಯ ಬಗ್ಗೆ ಮಾರ್ಗದರ್ಶನ ನೀಡುವುದು ಹಾಗೂ ಪ್ರಬಂಧ ಪೋರ್ಟಲ್ ನಲ್ಲಿ ವೆಚ್ಚದ ವಿವರವನ್ನು ದಾಖಲಿಸಲು ಕ್ರಮ ವಹಿಸುವುದು.
3. ತಾಲ್ಲೂಕು ಹಂತದ ಅಧಿಕಾರಿಗಳಿಗೆ ಶಾಲೆಗಳನ್ನು ದತ್ತು ನೀಡಿ LBA ಪ್ರಗತಿ ವರದಿಯನ್ನು SATS ನಲ್ಲಿ ದಾಖಲಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು. ನಿರಂತರ ಪ್ರಕ್ರಿಯೆ ಹಾಗೂ ಮೌಲ್ಯಾಂಕನ ಚಟುವಟಿಕೆ ನಡೆದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
4. ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಗೆ ಇಲಾಖೆಯಿಂದ ಹೊರಡಿಸುವ ಜ್ಞಾಪನ ಸುತ್ತೋಲೆಗಳನ್ನು ಅನುಸರಿಸುವುದು. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಮೌಲ್ಯಾಂಕನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಕಡ್ಡಾಯವಾಗಿ SATS ತಂತ್ರಾಂಶದಲ್ಲಿ ಪ್ರಗತಿಯನ್ನು ದಾಖಲಿಸಲು ಕ್ರಮವಹಿಸುವುದು.
5. ಪಾಠಾಧಾರಿತ ಮೌಲ್ಯಾಂಕನ ಚಟುವಟಿಕೆಗಳು ಪೂರ್ಣಗೊಂಡ ಎರಡು ದಿನಗಳಲ್ಲಿ, ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳು ಪೂರ್ಣಗೊಂಡ 7 ದಿನಗಳ ಒಳಗಾಗಿ ವಿದ್ಯಾರ್ಥಿಗಳ ಪ್ರಗತಿಯನ್ನು SATS ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವಂತೆ ಕ್ರಮವಹಿಸುವುದು.

**ಬಿ ಆರ್ ಸಿ/ ಇ ಸಿ ಓ/ ಬಿ ಆರ್ ಪಿ /ಸಿ ಆರ್ ಪಿ ರವರ ಜವಾಬ್ದಾರಿಗಳು**

1. ಪಾಠಾಧಾರಿತ ಮೌಲ್ಯಾಂಕನ ನಡೆಯುತ್ತಿರುವ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸುವುದು.
2. ತಾಲ್ಲೂಕು/ ಕ್ಲಸ್ಟರ್ ಹಂತದಲ್ಲಿ ಪಾಠಾಧಾರಿತ ಮೌಲ್ಯಾಂಕನ ಬಗ್ಗೆ ಮುಖ್ಯ ಶಿಕ್ಷಕರ ಸಭೆ ನಡೆಸಿ ವ್ಯವಸ್ಥಿತವಾಗಿ ಪಾಠಾಧಾರಿತ ಮೌಲ್ಯಾಂಕನ ನಡೆಸುವ ಬಗ್ಗೆ ಮಾರ್ಗದರ್ಶನ ನೀಡುವುದು.
3. ಮೌಲ್ಯಾಂಕನ ನಡೆಯುವಾಗ ಶಾಲೆಗಳಿಗೆ ಭೇಟಿ ನೀಡಿ ಕ್ರಮಬದ್ಧವಾಗಿ ನಡೆಯುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
4. ಶಾಲಾ ಹಂತದಲ್ಲಿ ಪಾಠಾಧಾರಿತ ಮೌಲ್ಯಾಂಕನ ಚಟುವಟಿಕೆ ನಡೆಸಿದ ನಂತರ ಮೌಲ್ಯ ಮಾಪನ ಮಾಡಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
5. ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಗೆ ಇಲಾಖೆಯಿಂದ ಹೊರಡಿಸುವ ಜ್ಞಾಪನ ಸುತ್ತೋಲೆಗಳನ್ನು ಅನುಸರಿಸುವುದು. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಮೌಲ್ಯಾಂಕನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಕಡ್ಡಾಯವಾಗಿ SATS ತಂತ್ರಾಂಶದಲ್ಲಿ ಪ್ರಗತಿಯನ್ನು ದಾಖಲಿಸಲು ಕ್ರಮವಹಿಸುವುದು.
6. ಪಾಠಾಧಾರಿತ ಮೌಲ್ಯಾಂಕನ ಚಟುವಟಿಕೆಗಳು ಪೂರ್ಣಗೊಂಡ ಎರಡು ದಿನಗಳಲ್ಲಿ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳು ಪೂರ್ಣಗೊಂಡ 7 ದಿನಗಳ ಒಳಗಾಗಿ ವಿದ್ಯಾರ್ಥಿಗಳ ಪ್ರಗತಿಯನ್ನು SATS ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವಂತೆ ಕ್ರಮವಹಿಸುವುದು.

**ಮುಖ್ಯ ಶಿಕ್ಷಕರುಗಳ ಜವಾಬ್ದಾರಿ**

1. ಮುಖ್ಯ ಶಿಕ್ಷಕರು ತಮ್ಮ ಬೋಧನಾ ವಿಷಯವನ್ನು ಕಡ್ಡಾಯವಾಗಿ ಬೋಧಿಸುವುದು ಹಾಗೂ ಕಲಿಕಾ ಪ್ರಕ್ರಿಯೆ ಹಾಗೂ ಮೌಲ್ಯಾಂಕನದಲ್ಲಿ LBA ಪ್ರಶ್ನಕೋಠಿಯನ್ನು ಬಳಸುವುದು.
2. ಎಲ್ಲಾ ವಿಷಯಗಳ LBA ಪ್ರಶ್ನಕೋಠಿಯನ್ನು ಅವಲೋಕಿಸಿ, ಶಿಕ್ಷಕರ ಹಾಗೂ ಅತಿಥಿ ಶಿಕ್ಷಕರ ಪಾಠಗಳನ್ನು ನಿರಂತರವಾಗಿ ವೀಕ್ಷಣೆ ಮಾಡಿ LBA ಪ್ರಶ್ನಕೋಠಿ ಬಳಸುತ್ತಿರುವುದನ್ನು ಖಾತರಿ ಮಾಡಿಕೊಂಡು ಮಾರ್ಗದರ್ಶನ ನೀಡುವುದು.
3. ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ನಿರಂತರವಾಗಿ ಪೋಷಕರ ಗಮನಕ್ಕೆ ತಂದು ನಿಧಾನ ಕಲಿಕೆ ಮಕ್ಕಳ

ಕಲಿಕಾ ಪ್ರಗತಿಗೆ ಪೋಷಕರ ಸಹಕಾರ ಪಡೆಯುವುದು.

4. ಪೋಷಕರು/ತಾಯಂದಿರ ಸಭೆ, SDMC ಸಭೆಗಳಲ್ಲಿ LBA ಪ್ರಶ್ನಕೋಠಿಯ ಬಗ್ಗೆ ಚರ್ಚಿಸಿ ಅರಿವು ಮೂಡಿಸುವುದು.
5. LBA ಪಶ್ನಕೋಠಿಯನ್ನು ಉತ್ತಮವಾಗಿ ಅನುಷ್ಠಾನ ಮಾಡಿ ಉತ್ತಮ ಫಲಿತಾಂಶ ಪಡೆದ ಶಾಲೆಗಳಲ್ಲಿನ ಉತ್ತಮ ಅಭ್ಯಾಸಗಳನ್ನು ಸಭೆಗಳಲ್ಲಿ ಹಂಚಿಕೊಳ್ಳುವುದು.
6. LBA ಪ್ರಶ್ನಕೋಠಿಯನ್ನು ಯಶಸ್ವಿಯಾಗಿ ಅನುಷ್ಠಾನಿಸುವ ಸಂಬಂಧ, 15 ದಿನಗಳಿಗೊಮ್ಮೆ ಶನಿವಾರ ಶಾಲಾ ಅವಧಿಯ ನಂತರ ಶಿಕ್ಷಕರ ಸಭೆ ಕರೆದು ಪ್ರಗತಿ ಪರಿಶೀಲನೆ ಮಾಡುವುದು
7. ಮುಖ್ಯ ಶಿಕ್ಷಕರು LBA ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿ SATS ನಲ್ಲಿ ದಾಖಲಿಸಿರುವ ಬಗ್ಗೆ ಪರಿಶೀಲಿಸುವುದು ಹಾಗೂ ಶಿಕ್ಷಕರಿಂದ ದೃಢೀಕರಣ ಪಡೆಯುವುದು.
8. ಮುಖ್ಯಶಿಕ್ಷಕರು ವಿಶ್ಲೇಷಣಾ ವರದಿಯನ್ವಯ ತರಗತಿವಾರು, ವಿಷಯವಾರು ಶಿಕ್ಷಕರೊಂದಿಗೆ ಚರ್ಚಿಸಿ ಮಾರ್ಗದರ್ಶನ ನೀಡಿ ಅನುಪಾಲನೆ ಮಾಡುವುದು.

ಪಾಠಧಾರಿತ ಮೌಲ್ಯಂಕನದ ಬಗ್ಗೆ ಮುಖ್ಯ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ನೀಡಿ ಅಗತ್ಯ ಕ್ರಮ ಕೈಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸೂಚಿಸಿದೆ.

Digitally signed by
K VIDYA KUMARI
Date: 12-01-2026
[illegible]:54:38

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು.

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.
4. ನಿರ್ದೇಶಕರು, DSERT ,ಹೊಸಕೆರೆಹಳ್ಳಿ, ಬೆಂಗಳೂರುರವರಿಗೆ ಮುಂದಿನ ಕ್ರಮಕ್ಕಾಗಿ

ಪ್ರತಿಯನ್ನು

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿರವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ
2. ಮಾನ್ಯ ಆಯುಕ್ತರು, ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು. ಹಾಗೂ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ ವಿಭಾಗ ರವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ.

**ಸಮಗ್ರ ಶಿಕ್ಷಣ -ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ,ನೃಪತುಂಗ ರಸ್ತೆ,ಬೆಂಗಳೂರು-560001**

ಸಂಖ್ಯೆ: E-82372/SSK/ASST/SBA/6/2025-JDQ    ದಿನಾಂಕ:22/01/2026

**ಸುತ್ತೋಲೆ**

ವಿಷಯ: 2026ನೇ ಸಾಲಿನ ರಾಜ್ಯದ ಸರ್ಕಾರಿ ಪ್ರೌಢ/ಆದರ್ಶ ಶಾಲೆಗಳಿಗೆ SSLC ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲು ಅನುದಾನ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ:1. 2025-26ನೇ ಸಾಲಿನ ಪಿ.ಎ.ಬಿಯಲ್ಲಿ ಅನುಮೋದನೆಯಂತೆ

2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿರವರು ದಿನಾಂಕ:05/12/2025 ರ ಸಭೆಯ ಸೂಚನೆಯನ್ವಯ

3. ದಿನಾಂಕ:03/11/2025 ರ ಸಭಾ ನಡವಳಿಯಂತೆ

***********

ಮೇಲ್ಕಂಡ ವಿಷಯ ಮತ್ತು ಉಲ್ಲೇಖದನ್ವಯ 2026ನೇ ಸಾಲಿನ ರಾಜ್ಯದ ಸರ್ಕಾರಿ ಪ್ರೌಢ/ಆದರ್ಶ ಶಾಲೆಗಳಿಗೆ SSLC ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡಿ ಪರೀಕ್ಷೆ ನಡೆಸಲು ಹಾಗೂ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಬೇಕಾಗಿರುವ ಬಿಳಿ ಹಾಳೆಗಳನ್ನು ಒದಗಿಸಲು ಪ್ರತಿ ವಿದ್ಯಾರ್ಥಿಗೆ ಒಂದು ಪರೀಕ್ಷೆಗೆ ರೂ.36 ರಂತೆ, ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳಿಗೆ ಈ ಕೆಳಕಂಡಂತೆ ನೇರವಾಗಿ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

| 2026ನೇ ಸಾಲಿನ ರಾಜ್ಯದ ಸರ್ಕಾರಿ ಪ್ರೌಢ/ಆದರ್ಶ ಶಾಲೆಗಳಿಗೆ SSLC ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆಗೆ ಅನುದಾನ ಬಿಡುಗಡೆ ಮಾಡಿರುವ ವಿವರ | | | | | | |
|---|---|---|---|---|---|---|
| ಕ್ರ.ಸಂ | ಕಾರ್ಯತಂತ್ರ | ಹಂತ | ಚಟುವಟಿಕೆ | ಭೌತಿಕ | ಘಟಕ ವೆಚ್ಚ 2ಪರೀಕ್ಷೆಗಳಿಗೆ ರೂ.ಗಳಲ್ಲಿ | ಒಟ್ಟು ಮೊತ್ತ ರೂ.ಗಳಲ್ಲಿ |
| 1 | ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು | 10ನೇ ತರಗತಿ | SSLC ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡಿ ಪರೀಕ್ಷೆ ನಡೆಸಲು | 277743 | 72 (36*2) | 19,9,97,496 |
| 2 | ಆದರ್ಶ ಶಾಲೆಗಳ ವಿದ್ಯಾರ್ಥಿಗಳು | | | 5391 | 72 (36*2) | 3,88,152 |
| | ಒಟ್ಟು | | | 283134 | | 2,03,85,648 |

ಶಾಲೆಗಳಿಗೆ ಬಿಡುಗಡೆಯಾಗಿರುವ ಪ್ರಶ್ನೆ ಪತ್ರಿಕೆ ಮುದ್ರಣ ಹಾಗೂ ಬಿಳಿ ಹಾಳೆಗಳನ್ನು ಖರೀದಿಸಲು ಅನುದಾನದ ಬಳಕೆಗೆ ಸಂಬಂಧಿಸಿದಂತೆ ಅಂಶಗಳು ಹಾಗೂ ಷರತ್ತುಗಳನ್ನು ಸಂಬಂಧಿತರು ತಪ್ಪದೇ ಪಾಲಿಸಲು ಸೂಚಿಸಿದೆ.

**ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ)ರವರ ಜವಾಬ್ದಾರಿ**

1. ಉಪನಿರ್ದೇಶಕರು (ಆಡಳಿತ)ರವರು ತಮ್ಮ ಜಿಲ್ಲೆಗೆ ಅನುದಾನ ಬಂದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡುವ ಸಂಬಂಧ ಶಾಲೆಗಳಿಗೆ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವುದು ಹಾಗೂ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಂದ ಈ ಸಂಬಂಧ ಶುಲ್ಕ ಸಂಗ್ರಹಿಸದಂತೆ ತುರ್ತಾಗಿ ಕ್ರಮವಹಿಸುವುದು.
2. ಉಪನಿರ್ದೇಶಕರವರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಎರಡು ಮತ್ತು ಮೂರನೇ ಪೂರ್ವ ಸಿದ್ಧತಾ ಪರೀಕ್ಷೆಗಳಿಗೆ ಬಳಸಲು ಸೂಚಿಸಿದೆ.
3. ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಬಂದಂತಹ ಉಪಯೋಗಿತ ಪ್ರಮಾಣ ಪತ್ರಗಳನ್ನು ಕ್ರೋಢೀಕರಿಸಿ, ಫೆಬ್ರವರಿ 28 ರೊಳಗೆ ರಾಜ್ಯ ಕಛೇರಿಗೆ ಸಲ್ಲಿಸುವುದು. ಹಾಗೂ ಪ್ರಬಂಧ ಪೋರ್ಟಲ್ ನಲ್ಲಿ ವೆಚ್ಚದ ವಿವರವನ್ನು ಕೂಡಲೇ ನಮೂದಿಸುವುದು.
4. ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು ಆಡಳಿತ ಮತ್ತು ಉಪನಿರ್ದೇಶಕರು ಅಭಿವೃದ್ಧಿ ರವರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಸ್ತುವಾರಿ ಅಧಿಕಾರಿಗಳ ಸಭೆ ನಡೆಸಿ ಶಾಲಾ ಹಂತದಲ್ಲಿ ಪೂರ್ವ ಸಿದ್ಧತಾ ಪರೀಕ್ಷೆಯನ್ನು ನಡೆಸಿ ಬಿಡುಗಡೆಯಾಗಿರುವ ಅನುದಾನವನ್ನು ಬಳಸಿಕೊಂಡು ನಿಯಮಾನುಸಾರವಾಗಿ ನಡೆಸುವ ಬಗ್ಗೆ ಅನುಪಾಲನೆಗಾಗಿ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸುವುದು.
5. ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಕಛೇರಿಯಿಂದ ಪೂರ್ವ ಸಿದ್ಧತಾ ಪರೀಕ್ಷೆ ಪ್ರಶ್ನೆ ಪತ್ರಿಕೆ ಮುದ್ರಣಕ್ಕಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ನಿಯಮಾನುಸಾರವಾಗಿ ಖರ್ಚು ಭರಿಸುವ ಬಗ್ಗೆ ಮತ್ತು ಖರ್ಚು ವೆಚ್ಚದ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲಿಸುವುದು.

**ಶಾಲಾ ಮುಖ್ಯ ಶಿಕ್ಷಕರುಗಳ ಜವಾಬ್ದಾರಿಗಳು:**

1. ಮುಖ್ಯ ಶಿಕ್ಷಕರು ಬಿಡುಗಡೆಯಾದ ಅನುದಾನವನ್ನು ಎರಡು ಹಾಗೂ ಮೂರನೇ ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯಕ್ಕೆ (Xerox) ಹಾಗೂ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಿಗೆ ಬಿಳಿ ಹಾಳೆ ಒದಗಿಸಲು ತಿಳಿಸಿದೆ. ಈ ಸಂಬಂಧ ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸದಂತೆ ಕ್ರಮವಹಿಸುವುದು.
2. ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಪೋಷಕರಿಗೆ ಪೂರ್ವ ಸಿದ್ಧತಾ ಪರೀಕ್ಷೆ ನಡೆಸುವ ಪ್ರಾಮುಖ್ಯತೆ ಬಗ್ಗೆ ಅರಿವು ಮೂಡಿಸುವುದು. ಮಗುವಿನ ಕಲಿಕಾ ಮಟ್ಟವನ್ನು ಪೂರ್ವ ಸಿದ್ಧತಾ ಪರೀಕ್ಷೆ ನಡೆಸುವ ಮೂಲಕ ಹೇಗೆ ಸುಧಾರಿಸಬಹುದೆಂದು ಪೋಷಕರ ಸಭೆಯಲ್ಲಿ (Parent-Teacher Meet) ತಿಳಿಸುವುದು.
3. ಸಂಬಂಧಿತ ಶಾಲಾ ಮುಖ್ಯ ಶಿಕ್ಷಕರು ಎಸ್.ಎಸ್.ಎಲ್.ಸಿ ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡಿ ವಿದ್ಯಾರ್ಥಿಗಳಿಗೆ ಬಿಳಿ ಹಾಳೆಗಳನ್ನು ನೀಡಿ ಪರೀಕ್ಷೆಯನ್ನು ಯಶಸ್ವಿಯಾಗಿ ಸರ್ಕಾರದ ಆದೇಶದಂತೆ ನಡೆಸುವುದು.
4. ಸಂಬಂಧಿತ ಶಾಲಾ ಮುಖ್ಯ ಶಿಕ್ಷಕರು **ಅನುದಾನ ದೊರೆತ ಕೂಡಲೇ ಪರೀಕ್ಷೆಗಾಗಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಬಿಳಿ ಹಾಳೆಗಳನ್ನು ಖರೀದಿಸಬೇಕು.** ಎಸ್.ಎಸ್.ಎಲ್.ಸಿ ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡಿ ಪರೀಕ್ಷೆ ಮುಗಿದ ನಂತರ ಕಡ್ಡಾಯವಾಗಿ ಉಪಯೋಗಿತ ಪ್ರಮಾಣ ಪತ್ರವನ್ನು ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರ ಕಛೇರಿಗೆ ಸಲ್ಲಿಸುವುದು.
5. ಸದರಿ ಕಾರ್ಯದ ಅನುಷ್ಠಾನಕ್ಕೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲಾಗಿರುವ ಅನುದಾನದಿಂದ ನಿಯಮಾನುಸಾರ ಭರಿಸತಕ್ಕದ್ದು.

6. ಆರ್ಥಿಕ ಮಿತವ್ಯಯ ಆದೇಶ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಪಾಲಿಸತಕ್ಕದ್ದು.
7. ಒದಗಿಸಲಾದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು, ಇತರೆ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು.

ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು,(ಆಡಳಿತ) ಮತ್ತು (ಅಭಿವೃದ್ಧಿ), ಸಾ.ಶಿ.ಇ ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ –ಕರ್ನಾಟಕ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರಿಗೆ ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಇವರ ಮೂಲಕ
3. ರಾಜ್ಯದ ಎಲ್ಲಾ ಸಂಬಂಧಿತ ಶಾಲಾ ಮುಖ್ಯ ಶಿಕ್ಷಕರು/ ಉಪಪ್ರಾಂಶುಪಾಲರು/ ಪ್ರಾಂಶುಪಾಲರು – ಸಂಬಂಧಿಸಿದ ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ.

ಪ್ರತಿಯನ್ನು ಮಾಹಿತಿಗಾಗಿ,

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ
2. ಮಾನ್ಯ ಅಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರುರವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ

ಅನುಬಂಧ-2

Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4. 100 FT RING ROAD, BANASHANKARI 3 RD STAGE BENGALURU - 560 085
Email. dpi.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಸಂಖ್ಯೆ: E-89116/DSERT/EVG/EVLU/1/TECD/2025-26 ದಿನಾಂಕ: 05.03.2026

<u>ಸುತ್ತೋಲೆ</u>

ವಿಷಯ : ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿಗೆ 6 ರಿಂದ 9ನೇ ತರಗತಿಯ ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕನ (SA-2) ಕಾರ್ಯ ನಿರ್ವಹಣೆ ಕುರಿತು.

ಉಲ್ಲೇಖ : 1.ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ ರವರ ಸುತ್ತೋಲೆ ಸಂಖ್ಯೆ: E-29933/DSERT/EVG/1-10ಮೌಲ್ಯಾಂಕನ/2025-26 ದಿನಾಂಕ: 17.07.2025.
2. ಏಕಕಡತ ಸಂಖ್ಯೆ : SSK/ASST/SBA/6/2025-JDQ/computer no : 82372.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2025-26ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮವನ್ನು ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ ಶಾಲೆಗಳ 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕದ (Summative Assessment-2) ಮೌಲ್ಯಾಂಕನ ಕಾರ್ಯವನ್ನು ಇಲಾಖಾ ವತಿಯಿಂದ ನಡೆಸಲಾಗುತ್ತಿದೆ. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮೌಲ್ಯಾಂಕನವನ್ನು ಮಾಡಲು ಅನುಕೂಲವಾಗುವಂತೆ ಏಕರೂಪದ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, DSERT (https://dsert.karnataka.gov.in.) ಮತ್ತು KSQAAC (https://kseab.karnataka.gov.in) ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಈ ಮೌಲ್ಯಾಂಕನವು ಅತ್ಯಂತ ಸರಳವಾಗಿದ್ದು, ವಿದ್ಯಾರ್ಥಿಗಳ ಕಲಿಕಾ ನ್ಯೂನ್ಯತೆಯನ್ನು ನೀಗಿಸಿ ಕಲಿಕಾ ಫಲಾಧಾರಿತ ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸಲು ಕೈಗೊಳ್ಳಲಾಗಿರುವ ದೀರ್ಘಕಾಲಿಕ ಯೋಜನೆಯಾಗಿದೆ. ಹತ್ತನೇ ತರಗತಿಯಲ್ಲಿ ವಿದ್ಯಾರ್ಥಿಗಳು ಯಾವುದೇ ಒತ್ತಡ ಹಾಗೂ ಆತಂಕವಿಲ್ಲದೆ ಸುಗಮವಾಗಿ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶ ಗಳಿಸುವುದು ಇದರ ಉದ್ದೇಶ. ಅಗತ್ಯ ಕಲಿಕಾ ಉಪಕ್ರಮಗಳನ್ನು ಯೋಜಿಸಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸುಲಭವಾಗಿ ಲಭ್ಯವಾಗುವಂತೆ ಮಾಡುವ ಮೂಲಕ ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿಗಳು ಶಾಲೆ ಬಿಡುವ ಪ್ರಮಾಣ ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ. ಪ್ರಸ್ತುತ ಸಾಲಿನಲ್ಲಿ ಪಾಠಾಧಾರಿತ ಮೌಲ್ಯಾಂಕನವನ್ನು ಜಾರಿಗೆ ತಂದಿದ್ದು, ಇದನ್ನು ಆಧರಿಸಿ ಪ್ರತಿ ಪಾಠದ ನಂತರ ವಿದ್ಯಾರ್ಥಿಗಳಿಗೆ ಮೌಲ್ಯಾಂಕನವನ್ನು ನಡೆಸಲಾಗಿರುತ್ತದೆ. ಸದರಿ ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕವು ಒಟ್ಟಾರೆಯಾಗಿ ವಿದ್ಯಾರ್ಥಿಗಳ ಕಲಿಕಾ ನ್ಯೂನ್ಯತೆಯನ್ನು ತಿಳಿಯುವ ಉದ್ದೇಶ ಹೊಂದಿದೆ. ಈ ಮೌಲ್ಯಾಂಕನವನ್ನು RTE ಕಾಯ್ದೆ ಮತ್ತು ಸಂಬಂಧಿತ ನಿಯಮಗಳನ್ವಯ ನಿರ್ವಹಿಸಲಾಗುತ್ತಿದೆ. ಇದು ವಿದ್ಯಾರ್ಥಿಗಳನ್ನು ಅನುತ್ತೀರ್ಣ ಮಾಡುವ ಮೌಲ್ಯಾಂಕನವಾಗಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಶಾಲೆಗಳಿಗೆ ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕನವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಮುಂದಿನ ಸಾಲಿನಲ್ಲಿ ಉಳಿದ ಶಾಲೆಗಳಲ್ಲಿಯೂ ಅನುಷ್ಠಾನಗೊಳಿಸಲಾಗುವುದು. ಆದ್ದರಿಂದ, ಪರೀಕ್ಷಾ ಭಯ ಮತ್ತು ಒತ್ತಡವಿಲ್ಲದಂತೆ ಸದರಿ ಮೌಲ್ಯಾಂಕನವನ್ನು ನಡೆಸುವುದು ಶಾಲಾ ಮುಖ್ಯ ಶಿಕ್ಷಕರ ಹಾಗೂ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.

ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಸರಳವಾದ ಮಾದರಿ ಪ್ರಶ್ನೆಪತ್ರಿಕೆ, ಕೀ ಉತ್ತರ ಮತ್ತು ನೀಲನಕ್ಷೆ(Blueprint)ಯನ್ನು DSERT (https://dsert.karnataka.gov.in.) ಮತ್ತು KSQAAC (https://kseab.karnataka.gov.in) ವೆಬ್‌ಸೈಟ್ ನಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ. ಸಿದ್ಧಪಡಿಸಿರುವ ಮೌಲ್ಯಾಂಕನ ನಿರ್ವಹಣೆ ಮಾರ್ಗಸೂಚಿ ಹಾಗೂ ವೇಳಾಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ, ಶಿಕ್ಷಕರಿಗೆ ಮಾಹಿತಿ ನೀಡುವುದು ಹಾಗೂ ಶಾಲೆಗಳ "ಪ್ರಕಟಣಾ ಫಲಕ"ದಲ್ಲಿ (Notice Board) ಸದರಿ ವೇಳಾಪಟ್ಟಿಯನ್ನು ಪ್ರಕಟಿಸಿ, ವೇಳಾ ಪಟ್ಟಿಯಂತೆ ಮೌಲ್ಯಾಂಕನ ಕಾರ್ಯ ನಿರ್ವಹಿಸಲು ತಿಳಿಸಿದೆ.

ಮೌಲ್ಯಾಂಕನ ನಿರ್ವಹಣಾ ಮಾರ್ಗಸೂಚಿಗಳು :

- ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ 6 ರಿಂದ 9 ನೇ ತರಗತಿಗಳಿಗೆ ಕನ್ನಡ ಮಾಧ್ಯಮದಲ್ಲಿ ಎಲ್ಲಾ ವಿಷಯಗಳು, ಆಂಗ್ಲ ಮಾಧ್ಯಮದಲ್ಲಿ Core ವಿಷಯಗಳು 6 ಮತ್ತು 7ನೇ ತರಗತಿಗಳಿಗೆ English Bilingual, ಉರ್ದು ಮಾಧ್ಯಮದಲ್ಲಿ ಪ್ರಥಮ ಭಾಷೆ ಉರ್ದು ಹಾಗೂ Core ವಿಷಯಗಳು, ಮರಾಠಿ ಮಾಧ್ಯಮದಲ್ಲಿ ಪ್ರಥಮ ಭಾಷೆ ಮರಾಠಿ ಹಾಗೂ Core ವಿಷಯಗಳು, 8 & 9ನೇ ತರಗತಿಯ ಪ್ರಥಮ ಹಾಗೂ ತೃತೀಯ ಭಾಷೆ ಸಂಸ್ಕೃತ, ದ್ವಿತೀಯ ಭಾಷೆ ಕನ್ನಡ ವಿಷಯಗಳಿಗೆ LBA ಆಧರಿಸಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗಿದೆ.
- ಈ ಸಂಬಂಧ ಮಾದರಿ ಪ್ರಶ್ನೆಪತ್ರಿಕೆ, ಕೀ ಉತ್ತರ ಮತ್ತು ಪಾಠಾವಾರು ಅಂಕಗಳ ಹಂಚಿಕೆ (Lesson wise weightage) ಯನ್ನು DSERT (https://dsert.karnataka.gov.in.) ಮತ್ತು KSQAAC

(https://kseab.karnataka.gov.in) ವೆಬ್‌ಸೈಟ್ ನಲ್ಲಿ ಈಗಾಗಲೇ ಪ್ರಕಟಿಸಲಾಗಿದ್ದು, ಮಾದರಿ ಪ್ರಶ್ನೆಪತ್ರಿಕೆಯಂತೆ ದ್ವಿತೀಯ ಸಂಕಲನಾತ್ಮಕ ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು.

- ಉಳಿದ ವಿಷಯಗಳಿಗೆ ಶಾಲಾ ಹಂತದಲ್ಲಿಯೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿಕೊಳ್ಳುವುದು
- ಲಿಖಿತ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ, 6 ಮತ್ತು 7ನೇ ತರಗತಿಗಳಿಗೆ 40 ಅಂಕಗಳು, 8ನೇ ತರಗತಿಗೆ 50 ಅಂಕಗಳು ಹಾಗೂ 9ನೇ ತರಗತಿಗೆ ಪ್ರಥಮ ಭಾಷೆಗೆ 100 ಅಂಕಗಳು ಉಳಿದ ಭಾಷೆಗಳು ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಲಾಗಿದೆ.
- ಮೌಖಿಕ ಮತ್ತು ಆಂತರಿಕ ಮೌಲ್ಯಾಂಕನಕ್ಕೆ ಉಲ್ಲೇಖ 1ರ ಮೌಲ್ಯಾಂಕನ ಸುತ್ತೋಲೆಯಂತೆ ಕ್ರಮವಹಿಸುವುದು.
- ಸದರಿ ಪ್ರಶ್ನೆಪತ್ರಿಕೆಗಳನ್ನು KSQAAC ಮೂಲಕ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ Login ಗೆ ಕಳುಹಿಸಲಾಗುವುದು.
- ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು 8 ಮತ್ತು 9ನೇ ತರಗತಿಯ ಪ್ರಶ್ನೆ ಪತ್ರಿಕೆಗಳನ್ನು ವೇಳಾ ಪಟ್ಟಿಗನುಗುಣವಾಗಿ ತಮ್ಮ ಹಂತದಲ್ಲಿಯೇ ಮುದ್ರಣ ಮಾಡಿ ಮೌಲ್ಯಾಂಕನ ಕಾರ್ಯ ನಿರ್ವಹಿಸುವುದು
- ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ತಮ್ಮ ಶಾಲೆಗೆ ಜೋಡಣೆ ಮಾಡಿರುವ 6,7,ಮತ್ತು8ನೇ ತರಗತಿಗಳಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ವೇಳಾ ಪಟ್ಟಿಗನುಗುಣವಾಗಿ ಪ್ರಶ್ನೆ ಪತ್ರಿಕೆಗಳ ಒಂದು ಪ್ರತಿಯನ್ನು ನೀಡುವುದು.
- ಪ್ರಶ್ನೆ ಪತ್ರಿಕೆಗಳನ್ನು ಪಡೆದ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಪ್ರಶ್ನೆ ಪತ್ರಿಕೆಯ ಗೌಪ್ಯತೆಯನ್ನು ಕಾಯ್ದುಕೊಳ್ಳುವ ಮೂಲಕ ಯಾವುದೇ ಅವಗಡಗಳಿಗೆ ಅವಕಾಶವಿಲ್ಲದಂತೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಮೌಲ್ಯಾಂಕನ ಕಾರ್ಯ ನಿರ್ವಹಿಸುವುದು. ಮೌಲ್ಯಾಂಕನ ಕಾರ್ಯದಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಆಯಾ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
- ರಾಜ್ಯದ ಸರ್ಕಾರಿ ಶಾಲೆಗಳಲ್ಲಿ SA-2 ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ Online ಮೂಲಕ Confidential Modeನಲ್ಲಿ ಕಳುಹಿಸಲಾಗುವುದು. ಪರೀಕ್ಷೆಯ ಗೌಪ್ಯತೆಯನ್ನು ಕಾಪಾಡಿಕೊಂಡು SA-2 ಪರೀಕ್ಷೆಯನ್ನು ನಡೆಸುವ ಸಂಬಂಧ ಪ್ರಶ್ನೆಪತ್ರಿಕೆ ಮತ್ತು ಪರೀಕ್ಷೆ ಬರೆಯಲು ಬಿಳಿ ಹಾಳೆಗಳನ್ನು ನೀಡುವ ಸಲುವಾಗಿ SATS ನಲ್ಲಿನ ಮಾಹಿತಿಯಂತೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ 6ನೇ ತರಗತಿ ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ ರೂ. 20 ರಂತೆ, 8ನೇ ತರಗತಿ ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ ರೂ. 30 ರಂತೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಪ್ರಶ್ನೆಪತ್ರಿಕೆಗಳನ್ನು ಶಾಲಾ ಹಂತದಲ್ಲಿ ಮುದ್ರಣ ಮಾಡಲು SSK ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡುವ ಅನುದಾನವನ್ನು ನಿಯಮಾನುಸಾರ ಬಳಸಿಕೊಳ್ಳುವುದು

ಜಿಲ್ಲಾ ಹಂತದ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರ ಪಾತ್ರ:

- ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕನದ ವೇಳಾಪಟ್ಟಿಯಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ಮೌಲ್ಯಾಂಕನ ನಡೆಸಲು ಜಿಲ್ಲೆ ಮತ್ತು ಬ್ಲಾಕ್ ಹಂತದ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು.
- ಮೌಲ್ಯಾಂಕನ ಇಲ್ಲದ ದಿನಗಳಲ್ಲಿ ಶಾಲೆ ಎಂದಿನಂತೆ ನಡೆಯಲು ಕ್ರಮವಹಿಸುವುದು.
- ಮೌಲ್ಯಾಂಕನದ ನಂತರವೂ ಪೂರ್ಣಾವಧಿ ಶಾಲೆಯನ್ನು ನಡೆಸಲು ಕ್ರಮವಹಿಸುವುದು.
- ಮೌಲ್ಯಾಂಕನ ನಡೆಸಿದ ನಂತರ ಮೌಲ್ಯಮಾಪನ ಕಾರ್ಯವನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ ವೈಯಕ್ತಿಕ ಹಾಗೂ ಕ್ರೋಢೀಕೃತ ಅಂಕವಹಿಗಳಲ್ಲಿ ವಿದ್ಯಾರ್ಥಿಗಳ ಪ್ರಗತಿ ದಾಖಲಿಸಲು ಕ್ರಮವಹಿಸುವುದು.
- ಆಂತರಿಕ ಮೌಲ್ಯಾಂಕನ ಮತ್ತು ಮೌಖಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಯ ದಿನದಂದು ಅಥವಾ ಶಾಲಾವಧಿಯ ಇತರೆ ಸಮಯದಲ್ಲಿ ಶಾಲಾವಾರು ಅನುಕೂಲಕ್ಕನುಗುಣವಾಗಿ ನಿರ್ವಹಿಸಲು ಕ್ರಮ ವಹಿಸುವುದು.
- SATS ತಂತ್ರಾಂಶದಲ್ಲಿ ನಿಯಮಾನುಸಾರ ಅಂಕಗಳನ್ನು ನಮೂದಿಸಲು ಅಗತ್ಯ ಕ್ರಮಗಳನ್ನು ಕೈಗೊಂಡು ವಿಳಂಬಕ್ಕೆ ಅವಕಾಶ ನೀಡದಂತೆ ಫಲಿತಾಂಶವನ್ನು ಸಿದ್ಧಪಡಿಸಿ, ಪರೀಕ್ಷಾ ನಂತರ ನಡೆಯುವ ಸಮುದಾಯ ದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರ ಸಭೆಯನ್ನು ನಡೆಸಿ ಪ್ರತಿ ವಿದ್ಯಾರ್ಥಿಯ ಸಮಗ್ರ ಕಲಿಕಾ ಪ್ರಗತಿಯ ಮಾಹಿತಿಯನ್ನು ಹಂಚಿಕೊಳ್ಳಲು ಮಾರ್ಗದರ್ಶನ ನೀಡುವುದು.
- ಸದರಿ ಫಲಿತಾಂಶವನ್ನು ಆಧರಿಸಿ ಜಿಲ್ಲಾ ಹಂತದಲ್ಲಿ ವಿಶ್ಲೇಷಣೆ ಮಾಡಿ, ವಿಶ್ಲೇಷಣಾ ವರದಿಗನುಣವಾಗಿ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಕ್ರಮವಹಿಸುವುದು

ಬ್ಲಾಕ್/ ತಾಲ್ಲೂಕು ಹಂತದ BEO ಮತ್ತು BRC ಗಳ ಪಾತ್ರ:

- ಜಿಲ್ಲಾ ಹಂತಕ್ಕೆ ನೀಡಿರುವ ಎಲ್ಲಾ ಅಂಶಗಳನ್ನು ಒಳಗೊಂಡಂತೆ, CRP ಮತ್ತು ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
- ಬ್ಲಾಕ್ ಹಂತದ ಅಧಿಕಾರಿಗಳು SATS ತಂತ್ರಾಂಶದಲ್ಲಿ ಪ್ರತಿ ಶಾಲೆಯು ಮೌಲ್ಯಾಂಕನ ದಾಖಲಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು ಹಾಗೂ ಸಮುದಾಯ ದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರ ಸಭೆಯನ್ನು ನಡೆಸಿ ಪ್ರತಿ ವಿದ್ಯಾರ್ಥಿಯ ಸಮಗ್ರ ಕಲಿಕಾ ಪ್ರಗತಿಯ ಮಾಹಿತಿಯನ್ನು ಹಂಚಿಕೊಳ್ಳಲು ಮಾರ್ಗದರ್ಶನ ನೀಡುವುದು.
- ಸದರಿ ಫಲಿತಾಂಶವನ್ನು ಆಧರಿಸಿ ತಾಲ್ಲೂಕು ಹಂತದಲ್ಲಿ ವಿಶ್ಲೇಷಣೆ ಮಾಡಿ, ವಿಶ್ಲೇಷಣಾ ವರದಿಗನುಣವಾಗಿ ಬ್ಲಾಕ್/ತಾಲ್ಲೂಕು ಶೈಕ್ಷಣಿಕ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಕ್ರಮ ವಹಿಸುವುದು.

CRP ಗಳ ಪಾತ್ರ:

- ಬ್ಲಾಕ್ / ತಾಲ್ಲೂಕು ಹಂತದಲ್ಲಿ ನೀಡಿದ ಮಾರ್ಗದರ್ಶನದಂತೆ ಮೌಲ್ಯಾಂಕನ ಕಾರ್ಯ ನಿರ್ವಹಿಸುವುದು

- ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಸಂಬಂಧಿಸಿದ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಂದ ಪ್ರಶ್ನೆ ಪತ್ರಿಕೆಗಳನ್ನು ಸ್ವೀಕರಿಸಿ ಸಮರ್ಪಕವಾಗಿ ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- SATS ತಂತ್ರಾಂಶದಲ್ಲಿ ಪ್ರತಿಯೊಬ್ಬ ಶಿಕ್ಷಕ ತನ್ನ ತರಗತಿ ಮತ್ತು ವಿಷಯಕ್ಕನುಗುಣವಾಗಿ ನಿಯಮಾನುಸಾರ ಗ್ರೇಡ್ ಗಳನ್ನು ಇಂದೀಕರಿಸಲು ಅಗತ್ಯ ಕ್ರಮಗಳನ್ನು ಕೈಗೊಂಡು ವಿಳಂಬಕ್ಕೆ ಅವಕಾಶ ನೀಡದಂತೆ ಫಲಿತಾಂಶವನ್ನು ಸಿದ್ಧಪಡಿಸಿಕೊಳ್ಳಲು ಮಾರ್ಗದರ್ಶನ ನೀಡುವುದು.
- ನಿಗದಿ ಪಡಿಸಿದ ದಿನಾಂಕಗಳಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರ ಸಭೆಯನ್ನು ನಡೆಸಿ ಪ್ರತಿ ವಿದ್ಯಾರ್ಥಿಯ ಸಮಗ್ರ ಕಲಿಕಾ ಪ್ರಗತಿಯ ಮಾಹಿತಿಯನ್ನು ಹಂಚಿಕೊಳ್ಳಲು ಮಾರ್ಗದರ್ಶನ ನೀಡುವುದು.
- ಸದರಿ ಫಲಿತಾಂಶವನ್ನು ಆಧರಿಸಿ ಕ್ಲಸ್ಟರ್ ಹಂತದಲ್ಲಿ ವಿಶ್ಲೇಷಣೆ ಮಾಡಿ, ವಿಶ್ಲೇಷಣಾ ವರದಿಗನುಣವಾಗಿ ಕ್ಲಸ್ಟರ್ ಹಂತದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಕ್ರಮವಹಿಸುವುದು.

ಮುಖ್ಯ ಶಿಕ್ಷಕರ ಪಾತ್ರ:

- ಸುತ್ತೋಲೆಯಲ್ಲಿ ನೀಡಿದ ಮಾರ್ಗಸೂಚಿಯಂತೆ ಮೌಲ್ಯಾಂಕನ ಕಾರ್ಯ ನಿರ್ವಹಿಸುವುದು.
- ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಉಪನಿರ್ದೇಶಕರು (ಆಡಳಿತ) ಇವರಿಂದ ಶಾಲೆಗೆ ಜೋಡಣೆಯಾಗಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಮಾಹಿತಿಯನ್ನು ಪಡೆಯುವುದು.
- ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಪರೀಕ್ಷಾ ದಿನದಂದು ಜೋಡಣೆಯಾಗಿರುವ ಶಾಲೆಗಳ ಸಂಖ್ಯೆಗನುಗುಣವಾಗಿ ಪ್ರಶ್ನೆ ಪತ್ರಿಕೆಗಳ ಒಂದು ಪ್ರತಿಯನ್ನು ಮಾಧ್ಯಮವಾರು ಮುದ್ರಿಸಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕೆಳಗಿನ ಕೋಷ್ಟಕದಲ್ಲಿನ ವಿವರಣೆಯಂತೆ ನೀಡಲು ಕ್ರಮವಹಿಸುವುದು.

| ಮೌಲ್ಯಾಂಕನ ಚಟುವಟಿಕೆಗಳು | ನಿಗಧಿಪಡಿಸಿದ ಅವಧಿ |
|---|---|
| ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಶಾಲಾ ಲಾಗಿನ್ ನಲ್ಲಿ ಪ್ರಶ್ನೆ ಪತ್ರಿಕೆಯನ್ನು ಪಡೆಯುವುದು. | ಬೆಳಿಗ್ಗೆ 9:00 ರಿಂದ 9:30 |
| ಪ್ರಶ್ನೆ ಪತ್ರಿಕೆಗಳನ್ನು ಜೋಡಣೆಯಾದ ಶಾಲೆಗಳ ಸಂಖ್ಯೆಗನುಗುಣವಾಗಿ ಒಂದು ಪ್ರತಿಯನ್ನು ಮುದ್ರಿಸಿ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ನೀಡುವುದು. | ಬೆಳಿಗ್ಗೆ 9:30 ರಿಂದ 10:00 |
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಮುದ್ರಣ ಮಾಡುವುದು. | ಬೆಳಿಗ್ಗೆ 10:00 ರಿಂದ 11:00 |

- ಪ್ರಶ್ನೆ ಪತ್ರಿಕೆಯಲ್ಲಿ ಪರೀಕ್ಷಾ ಮಂಡಳಿಯಿಂದ ನೀಡಲಾಗಿರುವ ಶಾಲಾ ಸಂಕೇತವು ಮುದ್ರಣಗೊಳ್ಳುವುದರಿಂದ ಯಾವುದೇ ರೀತಿಯ ಅವಗಡಗಳು ಸಂಭವಿಸಿದ್ದಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯೋಪಾಧ್ಯಾಯರ ಮೇಲೆ ನಿಯಮಾನುಸಾರ ಕ್ರಮವಹಿಸಲಾಗುವುದು.
- ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರು, ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಂದ ಪಡೆದ ಪ್ರಶ್ನೆ ಪತ್ರಿಕೆಗಳನ್ನು ಗೌಪ್ಯತೆಯನ್ನು ಕಾಪಾಡುವ ಮೂಲಕ ತಮ್ಮ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಮುದ್ರಣ ಮಾಡಿ ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸುವುದು.
- SATS ತಂತ್ರಾಂಶದಲ್ಲಿ ಪ್ರತಿಯೊಬ್ಬ ಶಿಕ್ಷಕ ತನ್ನ ತರಗತಿ ಮತ್ತು ವಿಷಯಕ್ಕನುಗುಣವಾಗಿ ನಿಯಮಾನುಸಾರ ಗ್ರೇಡ್ ಗಳನ್ನು ಇಂದೀಕರಿಸಲು ಅಗತ್ಯ ಕ್ರಮಗಳನ್ನು ಕೈಗೊಂಡು ವಿಳಂಬಕ್ಕೆ ಅವಕಾಶ ನೀಡದಂತೆ ಫಲಿತಾಂಶವನ್ನು ಸಿದ್ಧಪಡಿಸಿಕೊಳ್ಳಲು ಮಾರ್ಗದರ್ಶನ ನೀಡುವುದು.
- ನಿಗದಿ ಪಡಿಸಿದ ದಿನಾಂಕಗಳಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರ ಸಭೆಯನ್ನು ನಡೆಸಿ ಪ್ರತಿ ವಿದ್ಯಾರ್ಥಿಯ ಸಮಗ್ರ ಕಲಿಕಾ ಪ್ರಗತಿಯ ಮಾಹಿತಿಯನ್ನು ಹಂಚಿಕೊಳ್ಳಲು ಮಾರ್ಗದರ್ಶನ ನೀಡುವುದು.
- ಸದರಿ ಫಲಿತಾಂಶವನ್ನು ಆಧರಿಸಿ ಕ್ಲಸ್ಟರ್ ಹಂತದಲ್ಲಿ ವಿಶ್ಲೇಷಣೆ ಮಾಡಿ, ವಿಶ್ಲೇಷಣಾ ವರದಿಗನುಣವಾಗಿ ಕ್ಲಸ್ಟರ್ ಹಂತದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಕ್ರಮವಹಿಸುವುದು.

ಶಿಕ್ಷಕರ ಪಾತ್ರ:

- ದ್ವಿತೀಯ ಸಂಕಲನಾತ್ಮಕ ಮೌಲ್ಯಾಂಕನ ನಡೆಸಲು ಮೇಲಾಧಿಕಾರಿಗಳ ಮಾರ್ಗದರ್ಶನದಂತೆ ಕ್ರಮ ವಹಿಸುವುದು.
- ಇಲಾಖಾ ವತಿಯಿಂದ ನೀಡಿರುವ ಪ್ರಶ್ನೆಪತ್ರಿಕೆಗಳನ್ನು ಹೊರತು ಪಡಿಸಿ ಉಳಿದ ವಿಷಯಗಳಿಗೆ ಶಾಲಾ ಹಂತದಲ್ಲಿಯೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿಕೊಳ್ಳುವುದು.
- ಲಿಖಿತ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ, 6 ಮತ್ತು 7ನೇ ತರಗತಿಗಳಿಗೆ 40 ಅಂಕಗಳು, 8ನೇ ತರಗತಿಗೆ 50 ಅಂಕಗಳು ಹಾಗೂ 9ನೇ ತರಗತಿಗೆ ಪ್ರಥಮ ಭಾಷೆಗೆ 100 ಅಂಕಗಳು ಉಳಿದ ಭಾಷೆಗಳು ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಮೌಲ್ಯಾಂಕನ ನಡೆಸುವುದು.
- 6, 7 ಮತ್ತು 8ನೇ ತರಗತಿಗಳಿಗೆ 10 ಅಂಕಗಳಿಗೆ ಮೌಖಿಕ ಹಾಗೂ 9ನೇ ತರಗತಿಗೆ ಪ್ರಥಮ ಭಾಷೆಗೆ 25 ಅಂಕಗಳು, ಉಳಿದ ಭಾಷೆಗಳು ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಆಂತರಿಕ ಮೌಲ್ಯಾಂಕನವನ್ನು ಉಲ್ಲೇಖ 1ರ ಮೌಲ್ಯಾಂಕನ ಸುತ್ತೋಲೆಯಂತೆ ಕ್ರಮವಹಿಸುವುದು

- ಪ್ರತಿಯೊಬ್ಬ ಶಿಕ್ಷಕರು ತನ್ನ ತರಗತಿ ಮತ್ತು ವಿಷಯಕ್ಕನುಗುಣವಾಗಿ ನಿಯಮಾನುಸಾರ ಗ್ರೇಡ್‌ಗಳನ್ನು SATS ತಂತ್ರಾಂಶದಲ್ಲಿ ಇಂದೀಕರಿಸಲು ಅಗತ್ಯ ಕ್ರಮಗಳನ್ನು ಕೈಗೊಂಡು ವಿಳಂಬಕ್ಕೆ ಅವಕಾಶ ನೀಡದಂತೆ ಫಲಿತಾಂಶವನ್ನು ಸಿದ್ಧಪಡಿಸಿಕೊಳ್ಳುವುದು.
- ನಿಗದಿ ಪಡಿಸಿದ ದಿನಾಂಕಗಳಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರ ಸಭೆಯನ್ನು ನಡೆಸಿ ಪ್ರತಿ ವಿದ್ಯಾರ್ಥಿಯ ಸಮಗ್ರ ಕಲಿಕಾ ಪ್ರಗತಿಯ ಮಾಹಿತಿಯನ್ನು ಹಂಚಿಕೊಳ್ಳಲು ಮಾರ್ಗದರ್ಶನ ನೀಡುವುದು.
- ಸದರಿ ಫಲಿತಾಂಶವನ್ನು ಆಧರಿಸಿ ವಿಷಯವಾರು, ತರಗತಿವಾರು, ವಿಶ್ಲೇಷಣೆ ಮಾಡಿ ವಿಶ್ಲೇಷಣಾ ವರದಿಗನುಣವಾಗಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಶೈಕ್ಷಣಿಕ ಅಭಿವೃದ್ಧಿಗೆ ಕ್ರಮ ವಹಿಸುವುದು.
- 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಪ್ರತಿ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಕಲಿಕಾ ಅಂತರವನ್ನು ಗುರುತಿಸಿ ಸೇತುಬಂಧ ಕಾರ್ಯಕ್ರಮ ಹಾಗೂ ಪರಿಹಾರ ಬೋಧನೆಯ ಮೂಲಕ ಎಲ್ಲಾ ವಿದ್ಯಾರ್ಥಿಗಳ ತರಗತಿ ನಿರ್ದಿಷ್ಟ ಕಲಿಕೆಯನ್ನು ಅನುಕೂಲಿಸಲು ಕ್ರಮವಹಿಸುವುದು.

ಸದರಿ ಕಾರ್ಯಕ್ಕೆ ಸಂಬಂಧಿಸಿದಂತೆ ಮೌಲ್ಯಾಂಕನ ಕಾರ್ಯದ ಎಲ್ಲಾ ಕಾರ್ಯಚಟುವಟಿಕೆಗಳ ಮೇಲುಸ್ತುವಾರಿಗೆ ಉಪನಿರ್ದೇಶಕರು (ಆಡಳಿತ) ರವರು ಒಬ್ಬರು ಶಿಕ್ಷಣಾಧಿಕಾರಿ /ವಿಷಯ ಪರಿವೀಕ್ಷಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಪರೀಕ್ಷಾ ಕಾರ್ಯವು ಸಮರ್ಪಕವಾಗಿ ಅನುಷ್ಠಾನಿಸಲು ಅಗತ್ಯಕ್ರಮ ಕೈಗೊಳ್ಳುವುದು. ಉಪನಿರ್ದೇಶಕರು (ಅಭಿವೃದ್ಧಿ) ಇವರು LBA ನೋಡಲ್ ಅಧಿಕಾರಿಯನ್ನು ಸದರಿ ಕಾರ್ಯದ ನೋಡಲ್ ಅಧಿಕಾರಿಯನ್ನಾಗಿ ನೇಮಿಸುವುದು ಹಾಗೂ ಮೌಲ್ಯಾಂಕನದ ಮೌಲ್ಯಮಾಪನ ಕಾರ್ಯ, ವಿದ್ಯಾರ್ಥಿಗಳ ಸಾಧನೆಯನ್ನು SATS ತಂತ್ರಾಂಶದಲ್ಲಿ ಇಂದೀಕರಣ, ಫಲಿತಾಂಶ ಪ್ರಕಟಣೆ, ಸದರಿ ಫಲಿತಾಂಶವನ್ನು ಆಧರಿಸಿ ವಿಶ್ಲೇಷಣೆ ಮಾಡಿ, ವಿಶ್ಲೇಷಣಾ ವರದಿಗನುಣವಾಗಿ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಕ್ರಮವಹಿಸುವುದು. ಒಟ್ಟಾರೆಯಾಗಿ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ತಮ್ಮ ಜಿಲ್ಲೆಯಲ್ಲಿ ಮೌಲ್ಯಾಂಕನ ಕಾರ್ಯವು ಸಮರ್ಪಕವಾಗಿ ಅನುಷ್ಠಾನಗೊಳ್ಳಲು ಅಗತ್ಯಕ್ರಮವಹಿಸಲು ತಿಳಿಸಿದೆ.

| | |
|---|---|
| (signature) 6/3/2026 | (signature) 6/3/2026 |
| ನಿರ್ದೇಶಕರು | ರಾಜ್ಯ ಯೋಜನಾ ನಿರ್ದೇಶಕರು |
| ಡಿ ಎಸ್ ಇ ಆರ್ ಟಿ | ಸಮಗ್ರ ಶಿಕ್ಷಣ ಕರ್ನಾಟಕ |

ಅಗತ್ಯ ಕ್ರಮಕ್ಕಾಗಿ :-

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ).
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು. ಶಾಲಾ ಶಿಕ್ಷಣ ಇಲಾಖೆ ಇವರಿಗೆ ಜಿಲ್ಲಾ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿರವರ ಮೂಲಕ,.
3. ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು/ಪ್ರಾಂಶುಪಾಲರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ,.
4. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಶಾಲಾ ಮುಖ್ಯ ಶಿಕ್ಷಕರು/ಪ್ರಾಂಶುಪಾಲರ ಮೂಲಕ,.
5. ಹಿರಿಯ ಸಹಾಯಕ ನಿರ್ದೇಶಕರು, SATS ವಿಭಾಗ, ಆಯುಕ್ತರ ಕಛೇರಿ.

ರವರಿಗೆ ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ :-

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿರವರಿಗೆ ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
5. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ.
6. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ ಆಯುಕ್ತಾಲಯ.
7. ನಿರ್ದೇಶಕರು, (ಪರೀಕ್ಷೆಗಳು) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.
8. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಕಛೇರಿ ಪ್ರತಿ.